ಮೂಲ ದಾವಾ ಸಂಖ್ಯೆ 251/2014 ಡಿ ಡಬ್ಲ್ಯೂ 3 ಎ. ಶೇಖರಗೌಡ ಬಿನ್ ಎ. ಬಸವನಗೌಡ

(ದಿನಾಂಕ 17-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲು ವಾದಿಗಳ ಪರ ಶ್ರೀ ಹೆಚ್ ಎಸ್ ಎನ್ ವಕೀಲರಿಂದಃ-

ನನಗೆ ವಾದಿಗಳ ಮತ್ತು ಪ್ರತಿವಾದಿಗಳ ಪರಿಚಯ ಇರುತ್ತದೆ. ನನಗೆ ತಿಳುವಳಿಕೆ ಬಂದಾಗಿನಿಂದಲೂ ವಾದಿಯ ಮತ್ತು ಪ್ರತಿವಾದಿಯ ಪರಿಚಯ ಇರುತ್ತದೆ. ಪ್ರತಿವಾದಿಯು ಅವರು ಸಾಲದ ಭದ್ರತೆಗಾಗಿ ವಾದಿಯಿಂದ ರೂ.2 ಲಕ್ಷ ಸಾಲವನ್ನು ಪಡೆದುಕೊಂಡಿದ್ದು, ಸಾಕ್ಷಿ ಹೇಳುವಂತೆ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ. ನಾನು ವಾದಿ ಸಾಲದ ಭದ್ರತೆಗಾಗಿ ದಾಖಲೆ ಬರೆದುಕೊಡುವಾಗ ಹಾಜರಿದ್ದೆ. ದಿಃ 13-12-2011 ರಂದು ಸಾಲದ ಭದ್ರತೆಗಾಗಿ ಪ್ರತಿವಾದಿಯು ವಾದಿಗೆ ದಾಖಲಾತಿಯನ್ನು ಬರೆದುಕೊಡಲು ಸಾಕ್ಷಿದಾರರಾಗಿ ಪ್ರತಿವಾದಿ ನನ್ನನ್ನು ಕರೆದುಕೊಂಡು ಹೋದರು. ಸಾಲದ ಭದ್ರತೆಯ ದಾಖಲಾತಿಯನ್ನು ವಾದಿಯು ಬರೆದುಕೊಂಡು ಬಂದಿದ್ದು, ಎಲ್ಲಿ ಬರೆದುಕೊಂಡು ಬಂದರೆಂದು ನನಗೆ ಗೊತ್ತಿರುವುದಿಲ್ಲ. ನಾನು ಆ ದಾಖಲೆಯನ್ನು ಓದಿ ನೋಡಿರುವುದಿಲ್ಲ.

2. ಭದ್ರತೆ ದಾಖಲಾತಿಯನ್ನು ಪ್ರತಿವಾದಿಯು ಹನುಮಗೊಂಡನಹಳ್ಳಿಯಲ್ಲಿರುವ ಸ್ವತ್ತಿಗೆ ಸಂಬಂಧಿಸಿದಂತೆ ವಾದಿಗೆ ಬರೆದುಕೊಡಲಾಗಿತ್ತು. ದಾವಾ ಸ್ವತ್ತಿನ ಸರ್ವೆ ನಂ.206 ಎ ವಿಸ್ತೀರ್ಣ 2 ಎಕರೆ 6 ಸೆಂಟ್ಸ ಮತ್ತು 206 ಬಿ ವಿಸ್ತೀರ್ಣ 4 ಎಕರೆ 29 ಸೆಂಟ್ಸ ಆಗಿರುತ್ತದೆ. ವ್ಯವಹಾರ ಎಲ್ಲಿ ನಡೆದಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಪ್ರಮಾಣಪತ್ರದಲ್ಲಿ ಬರೆದಿರುವಂತಹ ಮಾಹಿತಿ ನನಗೆ ತಿಳಿದಿರುತ್ತದೆ. ನನಗೆ ಸದರಿ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಆದಂತಹ ವ್ಯವಹಾರದ ಕುರಿತು ಯಾವುದೇ ಮಾಹಿತಿ ಇರದಿದ್ದರೂ ಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಭದ್ರತೆಗಾಗಿ ಬರೆದುಕೊಡಲಾಗಿತ್ತು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮೂಲ ದಾವಾ ಸಂಖ್ಯೆ 251/2014 ಡಿ ಡಬ್ಲ್ಯೂ 3 ಎ. ಶೇಖರಗೌಡ ಬಿನ್ ಎ. ಬಸವನಗೌಡ

3. ವಾದಿಯ ಅಣ್ಣನಾದ ಬಾವಿ ವಿಜಯೇಂದ್ರರವರು ಅಸಲು ದಾವಾ ನಂ.143/2013 ರಂತೆ ನನ್ನ ಮತ್ತು ನನ್ನ ಅಣ್ಣನ ವಿರುದ್ಧ ಅಸಲು ದಾವೆ ದಾಖಲುಪಡಿಸಿದ್ದರು ಎಂದರೆ ಸರಿ. ನನ್ನ ವಿರುದ್ಧ ಇರುವಂತಹ ಪ್ರಕರಣವು ಪ್ರಸ್ತುತ ಚಾಲ್ತಿಯಲ್ಲಿರುತ್ತದೆಂದರೆ ಸರಿ.

4. ನಾನು ವಾದಿಯು ಎ ಪಿ ಎಂ ಸಿ ಮಾರುಕಟ್ಟೆಯಲ್ಲಿ ಬೀಜ ಗೊಬ್ಬರದ ಅಂಗಡಿ ಹೊಂದಿರುವುದನ್ನು ನೋಡಿರುತ್ತೇನೆ. ಆ ಅಂಗಡಿಯ ಹೆಸರು ನಾನು ಪರಿಶೀಲಿಸಿರುವುದಿಲ್ಲ, ಆದರೆ ಅದು ದಲ್ಲಾಳಿ ಅಂಗಡಿಯಾಗಿರುತ್ತದೆ. ವಾದಿಯು ರೈತರು ಬೆಳೆದಂತಹ ಬೆಳೆಯನ್ನು ಖರೀದಿ ಮಾಡುತ್ತಾರೆ. ನಾನು ನನ್ನ ಸಾಕ್ಷ್ಯಪ್ರಮಾಣಪತ್ರದಲ್ಲಿ ವಾದಿಯು ಹೆಚ್ ಬಿ ಹಳ್ಳಿಯ ಎ ಪಿ ಎಂ ಸಿ ಯಾರ್ಡನಲ್ಲಿ ಬೀಜಗೊಬ್ಬರ ಹಾಗೂ ವ್ಯಾಪಾರದ ಅಂಗಡಿಯನ್ನು ನಡೆಸುತ್ತಾ ಬಂದಿರುತ್ತಾರೆಂದು ಬರೆಸಿರುತ್ತೇನೆಂದರೆ ಸರಿ, ಸಾಕ್ಷಿ ಸ್ವಇಚ್ಚೆಯಿಂದ ಮುಂದುವರೆದು ವಾದಿಯು ಬೀಜಗೊಬ್ಬರವನ್ನು ಬೇರೆ ಅಂಗಡಿಯಿಂದ ಹಣವನ್ನು ಕೊಟ್ಟು ಕೊಡಿಸುತ್ತಿದ್ದರೆಂದು ನುಡಿಯುತ್ತಾರೆ. ಯಾವ ಅಂಗಡಿಯಿಂದ ವಾದಿಯು ಬೀಜ ಗೊಬ್ಬರವನ್ನು ಕೊಡಿಸುತ್ತಿದ್ದರೆಂದು ನನಗೆ ಗೊತ್ತಿರುವುದಿಲ್ಲ. ನಾನು ವಾದಿಯೊಂದಿಗೆ ಬೀಜಗೊಬ್ಬರವನ್ನು ಖರೀದಿಸುವಂತಹ ವ್ಯವಹಾರ ಮಾಡಿರುವುದಿಲ್ಲ. ವಾದಿಯು ಯಾವುದೇ ಬೀಜ ಗೊಬ್ಬರವನ್ನು ಹಣ ಕೊಟ್ಟು ಕೊಡಿಸುವ ವ್ಯವಹಾರ ಮಾಡಿಲ್ಲವೆಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ವಾದಿಯ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

5. ಪ್ರತಿವಾದಿಯು ವಾದಿಯಿಂದ ಬೀಜಗೊಬ್ಬರವನ್ನು ಖರೀದಿಸುವಾಗ ನಾನು ಹೋಗಿರುವುದಿಲ್ಲ.

ಮೂಲ ದಾವಾ ಸಂಖ್ಯೆ 251/2014 ಡಿ ಡಬ್ಲ್ಯೂ 3 ಎ. ಶೇಖರಗೌಡ ಬಿನ್ ಎ. ಬಸವನಗೌಡ

6. ನೀಲನಗೌಡ ಮತ್ತು ನಾಗನಗೌಡರವರು ನಮ್ಮ ಮನೆಯ ಹತ್ತಿರದ ವಾಸಿಗಳು. ನಾಗನಗೌಡರು ಮತ್ತು ನಾನು ನಿಪಿ-1ರ ದಾಖಲೆಗೆ ಸಹಿ ಮಾಡಿರುವುದಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

7. ಪ್ರತಿವಾದಿಯು ಮತ್ತು ಆಕೆಯ ಮಕ್ಕಳು ಹೊಟೇಲ್ ವ್ಯವಹಾರ ಮಾಡುತ್ತಾರೆಂದರೆ ಸರಿ. ಪ್ರತಿವಾದಿ ಮತ್ತು ಅವರ ಮಕ್ಕಳಿಗೆ ವ್ಯವಹಾರ ಜ್ಞಾನ ಇರುತ್ತದೆಂದರೆ ಸರಿ. ಪ್ರತಿವಾದಿ ಮತ್ತು ಅವರ ಮಕ್ಕಳಿಗೆ ಹಣಕಾಸಿನ ವ್ಯವಹಾರ ಜ್ಞಾನ ಇರಬಹುದು. ಅದೇ ರೀತಿ ಪ್ರತಿವಾದಿ ಮತ್ತು ಅವರ ಮಕ್ಕಳಿಗೆ ಪತ್ರ ವ್ಯವಹಾರ ಮಾಡುವಂತಹ ಜ್ಞಾನ ಇರುತ್ತದೆಂದರೆ ಸರಿ ಪ್ರತಿವಾದಿಯ ಮಾತನ್ನು ಕೇಳಿ ಮತ್ತು ಅವರಿಗೆ ಅನುಕೂಲ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ

8. ವಾದಿಯ ಸಹೋದರನು ನನ್ನ ವಿರುದ್ಧ ಅಸಲು ದಾವಾ ಪ್ರಕರಣ ದಾಖಲಿಸಿದ್ದು ಆ ದ್ವೇಷದಿಂದ ನಾನು ದಾವೆಯ ಕುರಿತು ಯಾವುದೇ ಮಾಹಿತಿ ಇರದಿದ್ದರೂ ವಾದಿಯ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

9. ನಾನು ನಿಪಿ-1ರ ದಾಖಲಾತಿ ಬರೆಯುವಾಗ ಹಾಜರಿರದಿದ್ದರೂ ಹಾಜರಿದ್ದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ